ನಂ.ತಾಂ.(1) ಪಿಆರ್. 9:97-98

ಭೂದಾಖಲೆಗಳ ಸಂಯುಕ್ತ ನಿರ್ದೇಶಕರ
ಕಛೇರಿ, ಮೈಸೂರು ವಿಭಾಗ, ಮೈಸೂರು

ದಿನಾಂಕ: 17-10-1997.
20

## ಸುತ್ತೋಲೆ

ವಿಷಯ:- ನಕಲು ವಿತರಿಸುವ ಬಗ್ಗೆ -

ಉಲ್ಲೇಖ:- 1) ನಿರ್ದೇಶಕರವರ ಸುತ್ತೋಲೆ ನಂ.ತಾಂ.60)94-95 ದಿನಾಂಕ:12-6-1996.

2) ನಿರ್ದೇಶಕರವರ ಸುತ್ತೋಲೆ ನಂ.ತಾಂತ್ರಿಕ.ಅ. 20:95-96, ದಿನಾಂಕ:16-8-1996.

—::—

ಭೂದಾಖಲೆಗಳ ನಕಲುಗಳನ್ನು ಕೇಳಿ ಬರುವ ಅರ್ಜಿದಾರರ ಅಹವಾಲುಗಳನ್ನು ಸಾಧ್ಯವಾದಲ್ಲಿ ಅದೇ ದಿನ ಅಥವಾ ಅನಿವಾರ್ಯ ಸಂದರ್ಭಗಳಲ್ಲಿ ಒಂದು ವಾರದೊಳಗೆ ಅವರು ಬಂದು ತೆಗೆದುಕೊಳ್ಳುವ ದಿನಾಂಕವನ್ನು ನಿಗದಿಪಡಿಸಿ, ಅದೇ ದಿನ ತಪ್ಪದೇ ವಿಲೇವಾರಿ ಮಾಡತಕ್ಕದ್ದು. ಯಾವುದೇ ಸಂದರ್ಭದಲ್ಲಿ ಗ್ರಾಮಾಂತರ ಪ್ರದೇಶಗಳಿಂದ ಬರುವ ಅರ್ಜಿದಾರರಿಗೆ ಅನಾವಶ್ಯಕವಾಗಿ ಪದೇ ಪದೇ ಕಛೇರಿಗೆ ಬರುವಂತೆ ಮಾಡಕೂಡದು. ಅವರ ಕೆಲಸಗಳನ್ನು ಸಕಾರಣವಿಲ್ಲದೆ ಮುಂದೂಡುವುದು ಹಾಗೂ ವಿಳಂಬ ಚಟುವಟಿಕೆಗಳನ್ನು ಎಲ್ಲಾ ಮಟ್ಟದಲ್ಲೂ ನಿಲ್ಲಿಸತಕ್ಕದ್ದೆಂದು ಮಾನ್ಯ ನಿರ್ದೇಶಕರವರು ಉಲ್ಲೇಖ (1) ರ ಸುತ್ತೋಲೆಯಂತೆ ಸೂಚಿಸಿದ್ದಾರೆ.

ಆದರೆ ದಿನಾಂಕ:15-10-1997 ರಂದು ಮಾನ್ಯ ನಿರ್ದೇಶಕರು, ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆ, ಬೆಂಗಳೂರು ಇವರ ಅಧ್ಯಕ್ಷತೆಯಲ್ಲಿ ನಡೆದ ಇಲಾಖಾ ಅಧಿಕಾರಿಗಳ ಸಭೆಯಲ್ಲಿ, ನಕಲು ವಿತರಿಸುವ ಬಗ್ಗೆ ಮಾರ್ಗಸೂಚನೆಗಳನ್ನು ನೀಡಿರುತ್ತಾರೆ. ಅದರಂತೆ ನಕಲು ಕೋರಿ ಬಂದ ಅರ್ಜಿಗಳಿಗೆ ಸಾಧ್ಯವಾದರೆ ಅದೇ ದಿನ ನಕಲು ತಯಾರಿಸಿ ಕೊಡುವುದು. ಅನಿವಾರ್ಯ ಸಂದರ್ಭದಲ್ಲಿ ಒಂದು ವಾರದ ನಿಗದಿತ ಅವಧಿಯೊಳಗೆ ನಕಲನ್ನು ತಯಾರಿಸಿ, ಅರ್ಜಿದಾರರ ವಿಳಾಸಕ್ಕೆ ಅಂಚೆ ಮೂಲಕ ಕಳುಹಿಸಿಕೊಡಲು ಸೂಚಿಸಿದೆ. ಅರ್ಜಿ ಸ್ವೀಕರಿಸುವ ಸಮಯದಲ್ಲಿ ಅರ್ಜಿದಾರರ ಸ್ವ ವಿಳಾಸವನ್ನು ಅರ್ಜಿಯಲ್ಲಿ ದಾಖಲು ಮಾಡಿದ್ದಾರೆಯೇ ಎಂಬುದನ್ನು ಸ್ಪಷ್ಟಪಡಿಸಿಕೊಳ್ಳಬೇಕು. ನಕಲುಗಳನ್ನು ದೃಢೀಕರಿಸಿ, ಕೊಡಲು ಅವಶ್ಯವಿದ್ದಷ್ಟು ಕೋರ್ಟ್ ಫೀ ಸ್ಟ್ಯಾಂಪನ್ನು ತೆಗೆದುಕೊಂಡು ಸ್ವೀಕೃತಿ ಪತ್ರ ಕೊಡಲು ಸೂಚಿಸಿದೆ.

ನಿಮ್ಮ ಕಛೇರಿಗಳಲ್ಲಿ ತೆರೆದಿರುವ ಸಾರ್ವಜನಿಕ ಸಂಪರ್ಕ ಘಟಕದಲ್ಲಿ ಈ ಕೆಳಕಂಡಂತೆ ಒಂದು ಫಲಕವನ್ನು ಹಾಕಲು ಸೂಚಿಸಿದೆ.

"ಅರ್ಜಿ ಕೊಟ್ಟ ದಿನಾಂಕದಂದು ಕೊಡಲು ಸಾಧ್ಯವಾಗದ ನಕಲುಗಳನ್ನು ಅಂಚೆ ಮೂಲಕ ಕಳಿಸಲಾಗುವುದು."

ಈ ಸುತ್ತೋಲೆಯಲ್ಲಿನ ಸೂಚನೆಯಂತೆ ಕ್ರಮ ತೆಗೆದುಕೊಳ್ಳಲು ಕಟ್ಟುನಿಟ್ಟಾಗಿ ಆದೇಶಿಸಿದೆ. ಸೂಚನೆಗಳನ್ನು ಸರಿಯಾಗಿ ಪಾಲಿಸದೇ ಇರುವ ಅಧಿಕಾರಿ: ಸಿಬ್ಬಂದಿ ವರ್ಗದವರ ಮೇಲೆ ತೀವ್ರ ಶಿಸ್ತಿನ ಕ್ರಮ ಜರುಗಿಸಲಾಗುವುದು. ಈ ಸುತ್ತೋಲೆ ತಲುಪಿದ ಬಗ್ಗೆ ಸ್ವೀಕೃತಿ ಕಳುಹಿಸುವುದು. ಅನುಷ್ಠಾನ ಮಾಡಿದ ಬಗ್ಗೆ ವರದಿ ಸಲ್ಲಿಸುವುದು.

B. Ramachandraiah

ಭೂದಾಖಲೆಗಳ ಸಂಯುಕ್ತ ನಿರ್ದೇಶಕರು,
ಮೈಸೂರು ವಿಭಾಗ, ಮೈಸೂರು.

ಗೆ: